# ಚಿನ್ನದ ಗರಿ



ವಿನು ಗಂಗೆ

ಕಲೆ: ಸಂತೋಷ್ ಸಸಿಹಿತ್ಲು



ಅಂದು ನಾಲ್ಕನೇ ತರಗತಿಯ ಮಕ್ಕಳು ವೈಭವ್ ಸುತ್ತ ನೆರೆದಿದ್ದರು. ಕಿವಿ ನೋವೆಂದು ಅಳಲೂ ಶಕ್ತಿ ಇಲ್ಲದೆ ಕಣ್ಣೀರು ಸುರಿಸುತ್ತಿದ್ದ ವೈಭವ್ ಕಪಾಳದಲ್ಲಿ ಮೂರಿಂಚು ಉದ್ದದ ಗಾಯವಾಗಿ ಮುಖ ಬಾವು ಬಂದಿತ್ತು. ಕಿವಿ ಹತ್ತಿರ ಬಿದ್ದ ಪೆಟ್ಟಿನ ಪರಿಣಾಮ ವೈಭವ್‌ಗೆ ನೋವು ತೀಕ್ಷ್ಣವಾಗಿತ್ತು. ಅಂತಹ ಗಾಯ ಹೇಗಾಯಿತು ಎಂದು ತರಗತಿಯ ಶಿಕ್ಷಕಿ ಬಹಳಷ್ಟು ಸಾರಿ ಕೇಳಿದ ನಂತರ ವೈಭವ್ ತನ್ನ ನೋಟ್ಸ್ ಅಪೂರ್ಣವಾಗಿರುವುದು ನೋಡಿ, ತನ್ನ ಅಪ್ಪ ಲೋಹದ ಪಟ್ಟಿಯಲ್ಲಿ (metal scale) ಹೊಡೆದುದರಿಂದ ಹೀಗಾಯಿತು ಎಂದು ಹೇಳಿದ. ಸ್ವಲ್ಪವೇ ತಪ್ಪಿದ್ದರೂ ಪ್ರಾಣಕ್ಕೇ ಕುತ್ತಾಗಬಹುದಾದ ಏಟಿನಿಂದ ಪಾರಾಗಿರುವುದು ಟೀಚರ್‌ಗೆ ಪಿಚ್ಚೆನಿಸಿದರೂ ಯಾರಿಗೂ ದೂರುವಂತಿರಲಿಲ್ಲ. Sick roomಗೆ ಕಳುಹಿಸಿ ವಿಶ್ರಾಂತಿ ಪಡೆಯಲು ತಿಳಿಸಿದರೂ ವೈಭವ್ ಕಿವಿ ನೋವು ಕಡಿಮೆಯಾಗಲಿಲ್ಲ.

ವೈಷ್ಣವ್, ವೈಭವ್ ಇಬ್ಬರು ಮಕ್ಕಳು ಸುಗುಣ – ಕೃಷ್ಣಮೂರ್ತಿ ದಂಪತಿಗೆ. ಹಳ್ಳಿಯ ಮೂಲದವರಾಗಿ ಉದ್ಯೋಗ ನಿಮಿತ್ತ ಬೆಂಗಳೂರಿಗೆ ಬಂದು ಕಾನ್ವೆಂಟ್ ಶಾಲೆಯೊಂದರಲ್ಲಿ ಇಬ್ಬರು ಮಕ್ಕಳನ್ನು ಓದಿಸುತ್ತಾ ಇದ್ದ ಕೃಷ್ಣಮೂರ್ತಿಗೆ ಯಾವ ಕೊರತೆಯೂ ಇರಲಿಲ್ಲ. ಹಿರಿಯ ಮಗ ವೈಷ್ಣವ್ ಓದಿನಲ್ಲಿ ಮುಂದೆ ಇದ್ದು ಆಗಾಗ ಪಠ್ಯ ಪೂರಕ ಹಲವು ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆಯುತ್ತಿದ್ದ. ಕೃಷ್ಣಮೂರ್ತಿ ತಮ್ಮ ಮಗನ ಸಾಧನೆಯನ್ನು ಹೆಮ್ಮೆಯಿಂದ ತಮ್ಮ what's app status, facebookಗೆ ಹಾಕಿ, ತಮ್ಮ ಸಂತೋಷವನ್ನು ಹಂಚಿಕೊಳ್ಳುತ್ತಿದ್ದರು. ಸ್ನೇಹಿತರು ಸೇರಿದಾಗ ತಮ್ಮ ಮಗ ವೈಷ್ಣವ್‌ನ ಸಾಧನೆಯ ಬಗ್ಗೆ ಹೇಳುವುದರಲ್ಲಿ ಅವರಿಗೆ ಎಲ್ಲಿಲ್ಲದ ಉತ್ಸಾಹ. ವೈಷ್ಣವ್ ತಮ್ಮ ತಲೆಯ ಮೇಲಿನ ಚಿನ್ನದ ಗರಿ ಎಂದೇ ಭಾವಿಸಿದ್ದರು. ಹಳ್ಳಿಯಿಂದ ತಾನು ಬೆಂಗಳೂರಿಗೆ ಬಂದು ಸ್ವಂತ ಮನೆ ಮಾಡಿಕೊಂಡಂತೆ, ತನ್ನ ಮಗ ವಿದೇಶದಲ್ಲಿ ಮನೆ ಮಾಡಿ ತಾವೂ ಅವನಿಂದ ಪ್ರಪಂಚ ನೋಡಬೇಕು ಎನ್ನುವುದು ಅವರ ಮನದಿಂಗಿತ. ಎಲ್ಲವೂ ಅವರಂದುಕೊಂಡಂತೆ ನಡೆಯುತ್ತಿದ್ದರೂ, ವೈಷ್ಣವ್ ಹುಟ್ಟಿದ ನಾಲ್ಕು ವರ್ಷಗಳ ನಂತರ ಹುಟ್ಟಿದ ವೈಭವ್ ಓದಿನಲ್ಲಿ ತೀರಾ ಸಾಧಾರಣವಾಗಿದ್ದನು. ಹತ್ತರಲ್ಲಿ ಹನ್ನೊಂದನೆಯವನನಾಗಿರುತ್ತಿದ್ದ ವೈಭವ್‌ನಲ್ಲಿ